ಓಎಸ್ ನಂಃ 754-14
ಪಿಡಬ್ಲೂ ಃ 1
ದಿಃ 02-08-2016ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.
ಮುಂದುವರೆದ ಪಾಟೀ ಸವಾಲುಃ ಶ್ರೀ ಸಿ ಬಿ ಎಚ್ ವಕೀಲರಿಂದ.

ವಿಭಾಗ ಪತ್ರದಲ್ಲಿ ಚೆಕ್ಕು ಬಂದಿ ಬರೆದಿರುತ್ತದೆ ಅಂದರೆ ಸರಿಯಲ್ಲ, ದಾವಾ ಆಸ್ತಿಯ ಚೆಕ್ಕು ಬಂದಿ ಪೂ.ಕ್ಕೆ ರಂಗಯ್ಯನ ಜಮೀನು ಪ.ಕ್ಕೆ ನರಸಿಂಹಯ್ಯನ ಜಮೀನು ಉ.ಕ್ಕೆ ಆಂಜನಪ್ಪ ಮತ್ತು ರಂಗಯ್ಯನ ಜಮೀನು ದ.ಕ್ಕೆ ರಸ್ತೆ ಇರುತ್ತದೆ, ಸರ್ವೆ ನಂಃ69ರ ಜಮೀನು 69/1, 69/2 ಮತ್ತು 69/3 ಎಂದು ಯಾವ ಇಸವಿಯಲ್ಲಿ ಪೋಡು ಆಗಿದೆ ಎಂಬುದು ನನಗೆ ಗೊತ್ತಿಲ್ಲ ಯಾವ ಆಧಾರ ಮೇಲೆ ಆಗಿರುತ್ತದೆ ಎಂಬುದು ನನಗೆ ಗೊತ್ತಿಲ್ಲ, ದಾವಾ ಆಸ್ತಿ ನನಗೆ ದಾನ ಪತ್ರದ ಮೂಲಕ ಮತ್ತು ಖಾತೆ ಮೂಲಕ ಬಂದಿರುತ್ತದೆ, ದಾನ ಪತ್ರವನ್ನು ಕೋರ್ಟಿಗೆ ಕೊಟ್ಟಿರುವುದಿಲ್ಲ, ದಾವಾ ಆಸ್ತಿ ನನಗೆ ದಾನ ಪತ್ರದ ಮೂಲಕ ಬಂದಿಲ್ಲ ಅಂದರೆ ಸರಿಯಲ್ಲ, ನನ್ನ ಅಜ್ಜಿ ಸರ್ವೆ ನಂಃ 69/2ರಲ್ಲಿ 1 ಎಕರೆ 20 ಗುಂಟೆ ಜಮೀನನ್ನು ಖರೀದಿಸಿದ್ದರು, ವಿಭಾಗ ಪತ್ರದಲ್ಲಿ ಸರ್ವೆ ನಂಃ69ರ ವಿಸ್ತೀರ್ಣವನ್ನು 2 ಎಕರೆ ಎಂದು ಬರೆದಿದೆ ಅಂದರೆ ಸರಿ, ವಿಭಾಗ ಪತ್ರ, ನನ್ನ ತಂದೆ ನರಸಿಂಹಯ್ಯನಿಗೆ ಮಾರಾಟ ಮಾಡಿರುವ ಕ್ರಯಪತ್ರ, ನರಸಿಂಹಯ್ಯ ಪಾಪಣ್ಣರವರಿಗೆ ಮಾರಾಟ ಮಾಡಿರುವ ಕ್ರಯಪತ್ರ ಹಾಗೂ ಪಾಪಣ್ಣ ಪ್ರತಿವಾದಿಗೆ ಮಾರಾಟ ಮಾಡಿರುವ ಕ್ರಯಪತ್ರಗಳಲ್ಲಿ ನಮೂದಿಸಿರುವ ಚೆಕ್ಕು ಬಂದಿ ತಪ್ಪಾಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ, ಚೆಕ್ಕು ಬಂದಿ ತಪ್ಪಾಗಿರುತ್ತದೆ ಎಂದು ನಾನು ದಾವಾ ಪತ್ರದಲ್ಲಿ ತಿಳಿಸಿರುವುದಿಲ್ಲ ಹಾಗೂ ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿಲ್ಲ ಅಂದರೆ ಸರಿಯಲ್ಲ, ದಾವಾ ಆಸ್ತಿ ನನ್ನ ಅಜ್ಜಿ ಕೊಂಡಿರುವ ಆಸ್ತಿಯಲ್ಲಿ ಬರುವುದಿಲ್ಲ, ದವಾ ಆಸ್ತಿ ಗ್ರಾಂಟೆಡ್ ಭೂಮಿ ಆಗಿರುತ್ತದೆ, ಗ್ರಾಂಟ್ಆದ ಬಗ್ಗೆ ದಾಖಲೆ ಕೊಟ್ಟಿಲ್ಲ ಅಂದರೆ ಸರಿ ನಮ್ಮ ಅಜ್ಜಿಯೆ ಕೊಟ್ಟು ಕಂದಾಯ ಇಲಾಖೆಯಲ್ಲಿ ನಡವಳಿಕೆಗಳು ನಡೆದಿರುತ್ತದೆ, ನನ್ನ ಅಜ್ಜಿ ಹೆಸರಿನಲ್ಲಿ ನಡೆದಿದ್ದ ಮಂಜೂರಾತಿ ನಡವಳಿಕೆಯ ಬಗ್ಗೆ ದಾಖಲೆ ಕೊಟ್ಟಿಲ್ಲ ಅಂದರೆ ಸರಿ, ಸರ್ವೆ ಇಲಾಖೆಯ ಅಧಿಕಾರಿಗಳನ್ನು ಶೇರಿಕ್ ಮಾಡಿಕೊಂಡು ದಾಖಲೆಗಳನ್ನು ಸೃಷ್ಟಿಸಿ ಅವುಗಳನ್ನು ಹಾಜರು ಪಡಿಸಿ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ, ದಾವಾ ಆಸ್ತಿ ನನಗೆ ಸೇರಿಸಿಲ್ಲ, ನನ್ನ ಅನುಭವದಲ್ಲಿ ಇಲ್ಲ, ಸುಳ್ಳು ದಾವೆ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ, ದಾವಾ ಆಸ್ತಿ ಪ್ರತಿವಾದಿಯ ಸ್ವಾಧೀನದಲ್ಲಿ ಇರುತ್ತದೆ ಅಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಓ

ಹಿರಿಯ ಸಿವಿಲ್ ಶ್ರೇಣಿ ನ್ಯಾಯಾಧೀಶರು,

ಮಾಗಡಿ.